# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 177/2020**

**ಸಿ.ಡಬ್ಲೂಃ 02 ಪಿಡಬ್ಲೂಃ 04**

ಸಾಕ್ಷಿದಾರರ ಹೆಸರುಃ ಫೈಜುಲ್ಲಾ ಡಿ. ತಂದೆಃಲತಿಫ ಸಾಹೇಬ ಡಿ.
ವಯಸ್ಸುಃ 41 ವರ್ಷ
ಉದ್ಯೋಗಃ ಪೊಲೀಸ ಕಾನ್ಸಟೇಬಲ ಹಡಗಲಿ ಪೊಲೀಸ್ ಠಾಣೆ.
ಸಾಕೀನಃ ಹಡಗಲಿ

ದಿಃ **29-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸ.ಸ.ಅ ರವರಿಂದ ;

ನಾನು **2024** ರಿಂದ ಹಡಗಲಿ ಪೊಲೀಸ್ ಠಾಣೆಯಲ್ಲಿ ಪೊಲೀಸ ಕಾನ್ಸಟೇಬಲ ಆಗಿ ಕೆಲಸ ಮಾಡುತ್ತಿದ್ದೇನೆ.

**02.** ಸದರಿ ಪ್ರಕರಣದಲ್ಲಿ ದಿಃ **07-04-2019** ರಂದು ಹೊಳಲು ಗ್ರಾಮದ ಗಾಂಧಿ ಸರ್ಕಲ ಹತ್ತಿರ ನಾನು ಚಾ.ಸಾ.**01, 03** ಮತ್ತು **04** ರವರು ಸಂಜೆ.**05.00** ಗಂಟೆ ಸುಮಾರಿಗೆ ಲೋಕಸಭಾ ಚುನಾವಣೆ ನಿಮಿತ್ಯ ಗಸ್ತು ಕರ್ತವ್ಯದಲ್ಲಿ ಇದ್ದೇವು. ಆಗ ಚಾ.ಸಾ.**01** ರವರಿಗೆ ಹೊಳಲು ಗ್ರಾಮದ ಎ.ಕೆ. ಕಾಲೋನಿಯಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿರುತ್ತದೆ ದಾಳಿಗೆ ಹೋಗಬೇಕೆಂದು ತಿಳಿಸಿರುತ್ತಾರೆ. ಆಗ ಚಾ.ಸಾ.**01** ರವರು ಸದರಿ ದಾಳಿಗೆ ಹೋಗಲು ನನಗೆ ಇಬ್ಬರು ಪಂಚರನ್ನು ಕರೆತರಲು ತಿಳಿಸಿರುತ್ತಾರೆ ಅದರಂತೆ ನಾನು ಚಾ.ಸಾ.**05** ಮತ್ತು **06** ರವರನ್ನು ಕರೆದುಕೊಂಡು ಬಂದು ಚಾ.ಸಾ.**01** ರವರ ಮುಂದೆ ಹಾಜರುಪಡಿಸಿರುತ್ತೇನೆ. ಆಗ ಚಾ.ಸಾ.**01** ರವರು ಪಂಚರಿಗೆ ತಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಹೋಗಲು ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಅವರು ಒಪ್ಪಿದ್ದರಿಂದ ನಾನು ಮತ್ತು ಚಾ.ಸಾ.**03, 04** ಹಾಗೂ ಪಂಚರು ಸೇರಿ ಚಾ.ಸಾ.**01** ರವರೊಂದಿಗೆ ನಮ್ಮ ದ್ವಿಚಕ್ರ ವಾಹನದಲ್ಲಿ ಸಂಜೆ.**05.35** ಗಂಟೆಗೆ ನಾವು ಗಸ್ತು ಕರ್ತವ್ಯದಲ್ಲಿ ಇದ್ದ ಸ್ಥಳದಿಂದ ಹೊರಟು ಹೊಳಲು ಗ್ರಾಮದ ಪಾಡುರಂಗ ನಗರದ ಹತ್ತಿರ ಹೋಗಿ ನಮ್ಮ ವಾಹನಗಳನ್ನು ನಿಲ್ಲಿಸಿ ಕೆಳಗೆ ಇಳಿದು ಸ್ವಲ್ಪ ದೂರದಿಂದ ಮರೆಮಾಚಿ ನೋಡಲಾಗಿ ಎ.ಕೆ. ಕಾಲೋನಿಯ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಒಂದು ಪ್ಲಾಸ್ಟಿಕ ಚೀಲದಲ್ಲಿ ಅಕ್ರಮವಾಗಿ ಮಧ್ಯ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುವುದನ್ನು ಖಾತ್ರಿ ಪಡೆಸಿಕೊಂಡು ಸಂಜೆ. **05.45** ಗಂಟೆಗೆ ಸದರಿ ವ್ಯಕ್ತಿಗಳ ಮೇಲೆ ದಾಳಿ ಮಾಡಿರುತ್ತೇನೆ. ಆಗ ನಾವು ದಾಳಿ ಮಾಡುತ್ತಿದ್ದಂತೆ

ಅಲ್ಲಿ ಸೇರಿದ್ದ ಸಾರ್ವಜನಿಕರು ಓಡಿ ಹೋಗಿರುತ್ತಾರೆ. ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯೂ ಸಹ ಓಡಿ ಹೋಗಿರುತ್ತಾನೆ. ಆಗ ನಾವು ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಲಾಗಿ ಆತನು ನಮ್ಮ ಸಿಗದೇ ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ. ಆಗ ಸದರಿ ಸ್ಥಳದಲ್ಲಿ ಇದ್ದ ಒಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿ ಬಿಟ್ಟು ಹೋಗಿದ್ದ ಒಂದು ಪ್ಲಾಸ್ಟಿಕ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ **90** ಎಮ್.ಎಲ್.ನ ಹೈವೆ ಫೈನ ವಿಸ್ಕೀಯ **39** ಪೌಚಗಳು ದೊರೆತಿರುತ್ತವೆ. ಆಗ ಚಾ.ಸಾ.**01** ರವರು ಮಧ್ಯ ಮರಾಟ ಮಾಡಿ ಓಡಿ ಹೋಗಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಮತ್ತು ಸ್ಥಳದಲ್ಲಿ ಇದ್ದ ಲಕ್ಕನಗೌಡರ ಹನುಮಂತ ತಂದೆ ಲಕ್ಕಪ್ಪರವರಿಗೆ ವಿಚಾರಿಸಲಾಗಿ ಆತನ ಹೆಸರು ಜಗ್ಗಿನ ದೇವೆಂದ್ರಪ್ಪ ತಂದೆ ನಿಂಗಪ್ಪ ಸಾಃಹೊಳಲು ಗ್ರಾಮ ಪಾಡುರಂಗ ನಗರ ಎಂದು ತಿಳಿಸಿರುತ್ತಾನೆ. ಸ್ಥಳದಲ್ಲಿ ಚಾ.ಸಾ.**01** ರವರು ಪರಿಶೋದನೆ ಮಾಡಲಾಗಿ ಒಂದು ಕೈ ಚೀಲದಲ್ಲಿ **315/-** ನಗದು ಹಣ ದೊರೆತಿರುತ್ತದೆ. ಸದರಿ ಪೌಚಗಳನ್ನು ಮತ್ತು ನಗದು ಹಣ ರೂ.**315/-** ರೂಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಜಪ್ತುಪಡೆಸಿಕೊಂಡಿರುತ್ತೇವೆ. ಸದರಿ ಮಧ್ಯದ ಪೌಚಗಳನ್ನು ರಸಾಯನಿಕ ಪರೀಕ್ಷೆಗಾಗಿ ಒಂದು ಪ್ರತ್ಯೇಕ ಚೀಲದಲ್ಲಿ ಹಾಕಿ, **SHO** ಅಂತ ಸೀಲು ಮಾಡಿ, ಚಾ.ಸಾ.**01** ಮತ್ತು ಪಂಚರವರ ಸಹಿಯುಳ್ಳ ಚೀಟಿಯನ್ನು ಅಂಟಿಸಿ ಸಂಜೆ.**05.45** ರಿಂದ **06.30** ಗಂಟೆಯವರೆಗೆ ಸ್ಥಳದಲ್ಲಿಯೇ ಪಂಚನಾಮೆ ಜರೂಗಿಸಿ ಮಧ್ಯದ ಪೌಚಗಳನ್ನು ಅಮಾನತ್ತು ಪಡೆಸಿಕೊಂಡಿರುತ್ತೇವೆ. ನಂತರ ಠಾಣೆಗೆ ವಾಪಸ್ಸು ಬಂದು ಮಧ್ಯ ಮಾರಾಟ ಮಾಡಿ ಸ್ಥಳದಲ್ಲಿಯೇ ಮಧ್ಯದ ಚೀಲವನ್ನು ಬಿಟ್ಟು ಓಡಿ ಹೋಗಿದ್ದ ವ್ಯಕ್ತಿಯ ವಿರುದ್ಧ ಚಾ.ಸಾ.**01** ರವರು ಚಾ.ಸಾ.**9** ರವರಿಗೆ ದೂರು ಸಲ್ಲಿಸಿರುತ್ತಾರೆ. ಸಾಕ್ಷಿಯು ನಿ.ಪಿ.**01** ರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.**01** ಸಿ. ಮತ್ತು ನಿ.ಪಿ.**02** ರ ಕಚ್ಛಾ ನಕಾಶೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.**02** ಸಿ. ಎಂದು ಗುರುತಿಸಲಾಯಿತು. ಸಾಕ್ಷಿಯು ಇಂದು ನ್ಯಾಯಾಲಯದ ಮುಂದೆ ಇರುವ ಮು.ಮಾ.**01** ರ ಹೈವಡರ್ಸ ಫೈನ ವಿಸ್ಕೀಯ **39** ಖಾಲಿ ಪೌಚಗಳನ್ನು ಮತ್ತು ಘಟನಾ ಸ್ಥಳದಲ್ಲಿ ದೊರೆತ ಮು.ಮಾ.**02** ರ ನಗದು ಹಣ ರೂ.**315/-** ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೇ ಎಂದು ನುಡಿದಿದ್ದು, ಇಂದು ಆರೋಪಿ ಗೈರು ಹಾಜರಾಗಿ

**ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಆತನನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ನುಡಿಯುತ್ತಾರೆ.**

***(*ಅರೋಪಿತರ ಹಾಜರಾತಿಯನ್ನು ವಿನಾಯಿತಿ ಕೋರಿ ಅರೋಪಿಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರೋಪಿತರ ಗುರುತುವಿಕೆಯನ್ನು ವಿವಾಧಿಸುವುದಿಲ್ಲ ಎಂಬ ನಿಭಂದನೆ ಮೇರೆಗೆ ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.*)***

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ.ಕೆ._ವಕೀಲರಿಂದಃ**

**03.** **ಆ ದಿನ ಗಾಂಧಿ ವೃತ್ತದಲ್ಲಿಯೇ ನಾವು ಗಸ್ತು ಕರ್ತವ್ಯವನ್ನು ಮಾಡುತ್ತಿದ್ದೇವು. ಈ ಪ್ರಕರಣದ ಮಾಹಿತಿ ಬಂದ ನತರ ನಾನು ಚಾ.ಸಾ.1, ಚಾ.ಸಾ.4, ಪಾಂಡುನಗರಕ್ಕೆ ಹೋಗಿ ನಮ್ಮ ವಾಹನವನ್ನು ನಿಲ್ಲಿಸಿರುತ್ತೇವೆ. ಪಾಂಡುನಗರದಲ್ಲಿ ರಸ್ತೇಯ ಮೇಲೆ ವಾಹನವನ್ನು ನಿಲ್ಲಿಸಿರುತ್ತೇವೆ. ಆಗ ಸಮಯ ಸಂಜೆ.05.45 ಆಗಿತ್ತು. ಅಲ್ಲಿ ಕ್ಷಣಾರ್ಧದಲ್ಲಿ ನಾವು ಮರೆಮಾಚಿ ನಿಂತು ನೋಡಿ ದಾಳಿ ಮಾಡಿರುತ್ತೇವೆ. ನಾವು ಯಾವ ಯಾವ ಸಂಖ್ಯೆಯ ದ್ವಿಚಕ್ರ ವಾಹನದಲ್ಲಿ ಪಾಂಡುರಂಗ ನಗರಕ್ಕೆ ಹೋಗಿರುತ್ತೇವೆ ಎಂದು ನನಗೆ ನೆನಪು ಇರುವುದಿಲ್ಲ. ನಾವು ನಿಂತು ನೋಡಿದ ಜಾಗಕ್ಕೂ ಆರೋಪಿತ ಮಾರಾಟ ಮಾಡುತ್ತಿದ್ದ ಜಾಗಕ್ಕೂ 200 ಮೀಟರ ದೂರ ಇತ್ತು. ಅಲ್ಲಿ 3-4 ಜನ ಸಾರ್ವಜನಿಕರು ಇದ್ದರು. ಸಾರ್ವಜನಿಕರನ್ನು ಹಿಡಿಯಲು ಪ್ರಯತ್ನ ಮಾಡಿರುವುದಿಲ್ಲ. ಆರೋಪಿತನು ಯಾವ ದಿಕ್ಕಿನ ಕಡೆಗೆ ಓಡಿ ಹೋದ ಎಂದು ಮುಸ್ಸಂಜೆ ಆಗಿದ್ದರಿಂದ ನೆನಪು ಇರುವುದಿಲ್ಲ. ಆಗ ಕತ್ತಲಾಗಿರಲಿಲ್ಲ ಸ್ವಲ್ಪ ಬೆಳಕು ಇದ್ದು ಮುಸ್ಸಂಜೆ ಆಗಿತ್ತು.**

**04.** **ಆರೋಪಿತನನ್ನು ಹಿಡಿಯಲು ನಾನು ಚಾ.ಸಾ.3 ಮತ್ತು 4 ರವರು ಹೋಗಿರುತ್ತೇವೆ. ಓಡಿ ಹೋದವರು ಯಾರು ಎಂಬುವುದನ್ನು ಕೇಳಲು ಚಾ.ಸಾ.1 ರವರು ಹೇಳಿರುತ್ತಾರೆ. ಈಗ ಸಾಕ್ಷಿಗೆ ಮುದ್ದೆಮಾಲುಗಳಲ್ಲಿ ಇರುವ ಪೌಚಗಳನ್ನು ತೋರಿಸಿ ಅದರಲ್ಲಿ ಪಂಚರ ಮತ್ತು ಚಾ.ಸಾ.1 ರವರ ಸಹಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಪೌಚಗಳ ಮೇಲೆ ನನ್ನ ಸಹಿಯು ಇರುವುದಿಲ್ಲ. ನ್ಯಾಯಾಲಯದ ಮುಂದೆ ಮುದ್ದೆಮಾಲಿನ ತರ ಪೌಚಗಳು ಹೊರಗಡೆ ಬ್ರ್ಯಾಂಡಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸಿಗುವುದಿಲ್ಲ. ಮುದ್ದೆಮಾಲಿನ ತರಹದ ಪೌಚಗಳು ಹೊರಗಡೆ ಎಲ್ಲಾ ಬ್ರ್ಯಾಂಡಿ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ.**

**05. 315/-** ರೂಪಾಯಿ ನಾವು ದಾಳಿ ಮಾಡಿದ ಸ್ಥಳದಲ್ಲಿ ಕೈಚೀಲದಲ್ಲಿ ಇತ್ತು. **315/-** ರೂಪಾಯಿ ಯಾವ ಮುಖಬೆಲೆಯ ನೋಟುಗಳು ಇದ್ದವು ಎಂದು ಹೇಳಲು ನೆನಪು ಇರುವುದಿಲ್ಲ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ಪಂಚನಾಮೆಗೆ ಸಂಜೆ.**06.30** ಕ್ಕೆ ನಾನು ಸಹಿಯನ್ನು ಮಾಡಿರುತ್ತೇನೆ.

**06.** ನಾವು ದಿ.**07-04-2019** ರಂದು ಗಸ್ತು ಕರ್ತವ್ಯಕ್ಕೆ ಹೋಗಿರುವುದಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ, ಎ.ಕೆ. ಕಾಲೋನಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರು ಗಾಂಧಿ ಸರ್ಕಲನಲ್ಲಿ ನಿರ್ದಿಷ್ಟವಾಗಿ ಎಲ್ಲಿದ್ದರು ಎಂದು ನೆನಪು ಇರುವುದಿಲ್ಲ. ನಾವು ದಾಳಿಗೆ ಹೋಗಿರುವುದಿಲ್ಲ, ಪಂಚನಾಮೆ ಮಾಡಿರುವುದಿಲ್ಲ, ಠಾಣೆಯಲ್ಲಿಯೇ ಕುಳಿತುಕೊಂಡು ಪಂಚನಾಮೆಯನ್ನು ಬರೆದಿದ್ದು ನನ್ನ ಹಿರಿಯ ಅಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, " ನನ್ನ ಸಮಕ್ಷಮ "

**Sd/-**
(ಶ್ರೀಮತಿ.ಅಕ್ಷತಾ ಟಿ .)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.